**<u>ದಿನಾಂಕಃ 26-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಜೆ.ಪಿ ವಕೀಲರಿಂದಃ</u>**

ನನ್ನ ತಂದೆಯ ಹೆಸರು ನಿಂಗಪ್ಪ. ನನ್ನ ತಾಯಿಯ ಹೆಸರು ಸೋಮವ್ವ. ಸದರಿ ನಿಂಗಪ್ಪ ಮತ್ತು ಸೋಮವ್ವ ರವರಿಗೆ 4 ಜನ ಮಕ್ಕಳು ಅವರೆಂದರೆ- 1) ಚೆನ್ನಬಸಪ್ಪ, 2) ಗುಡ್ಡಪ್ಪ, 3) ಚಂದ್ರಪ್ಪ ಮತ್ತು 4) ದೇವಂದ್ರಪ್ಪ. ಈ ದಿನ ಸಾಕ್ಷ್ಯ ವನ್ನು ನನ್ನ ಪರವಾಗಿ ಮಾತ್ರ ನುಡಿಯಲು ಬಂದಿರುತ್ತೇನೆ. ದಾವಾ ಸ್ವತ್ತುಗಳ ಬಗ್ಗೆ ಹಾಗೂ ದಾವೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ. ನನ್ನ ತಾಯಿಗೆ ಈಗ ಸುಮಾರು 70 ವರ್ಷ ವಯಸ್ಸು ಆಗಿದೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಬರೆಯಿಸಲು ಮಾಹಿತಿಯನ್ನು ನಾನೇ ಒದಗಿಸಿರುತ್ತೇನೆ. ಸದರಿ ನನ್ನ ಪ್ರಮಾಣ ಪತ್ರದಲ್ಲಿ ನನ್ನ ತಾಯಿಯ ವಯಸ್ಸು 95 ವರ್ಷ ಎಂದು ಬರೆಯಿಸಿರುತ್ತೇನೆ ಎಂದರೆ ಸರಿ. ಸದರಿ ನನ್ನ ತಾಯಿಗೆ ಈಗ ಅರಳು-ಮರಳು ಆಗುತ್ತಿದ್ದರಿಂದ ನಾನು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತುಗಳು ಇವೆ ಎಂದರೆ ಸಾಕ್ಷಿ ನನ್ನ ತಂದೆಯ ಮೂರುವರೆ ಎಕರೆ, ನನ್ನ ತಾಯಿಯ ಏಳುವರೆ ಎಕರೆ ಜಮೀನು ಇದೆ ಎನ್ನುತ್ತಾರೆ. ಸದರಿ ನನ್ನ ತಂದೆ ಹಾಗೂ ತಾಯಿಯ ಆಸ್ತಿಯಲ್ಲಿ ನಮ್ಮ 4 ಜನ ಮಕ್ಕಳಿಗೆ ಸಮಭಾಗ ಇದೆ ಎಂದರೆ ಸಾಕ್ಷಿ ತಂದೆಯ ಆಸ್ತಿಯಲ್ಲಿ ಸಮಭಾಗ ಇದೆ, ತಾಯಿಯ ಆಸ್ತಿ ತಾಯಿಗೆ ಬೇಕು ಎನ್ನುತ್ತಾರೆ.

02. ದಾವಾ ಸ್ವತ್ತುಗಳಲ್ಲಿ ನನ್ನ ತಂದೆಯ ಆಸ್ತಿಗಳು ಯಾವವು ಹಾಗೂ ನನ್ನ ತಾಯಿಯ ಆಸ್ತಿಗಳು ಯಾವವು ಎಂದು ನಾನು ಶಾಲೆ ಕಲೆತಿಲ್ಲ ಆದ್ದರಿಂದ ಹೇಳಲು ಬರುವುದಿಲ್ಲ. ನನ್ನ ತಾಯಿಗೆ ನನ್ನ ತಾಯಿಯ ತವರು ಮನೆಯಿಂದ ಆಸ್ತಿ ಬಂದಿವೆ. ಸದರಿ ಆಸ್ತಿಗಳು ನನ್ನ ತಾಯಿಗೆ ಯಾವ ಡ - ನಂಬರಗಳ ಪ್ರಕಾರ ಬಂದಿವೆ ಎಂದು ನನಗೆ ಹೇಳಲು ಬರುವುದಿಲ್ಲ. 3 ನೇ ಪ್ರತಿವಾದಿಯ ಮಗ 1 ನೇ ಪ್ರತಿವಾದಿಯಿಂದ ಒಂದು ಸ್ವತ್ತನ್ನು ಅವಳಿಗೆ ಅರಿವು ಇಲ್ಲದ್ದನ್ನು ದುರುಪಯೋಗ ಪಡಿಸಿಕೊಂಡು ಬರೆಯಿಸಿಕೊಂಡಿರುತ್ತಾನೆ ಎಂದರೆ ಸರಿ. ಈವರೆಗೆ ಈ ದಾವೆಯಲ್ಲಿ ಪ್ರತಿ ಮುದ್ದತ್ತಿಗೆ ನಮ್ಮ ತಾಯಿ ಬರುತ್ತಿದ್ದರು

ಎಂದರೆ ಸರಿ. ಸದರಿ ನನ್ನ ತಾಯಿ ಈ ದಾವೆಯಲ್ಲಿ ಸಾಕ್ಷಿ ನುಡಿದರೆ ತನ್ನ 4 ಜನ ಮಕ್ಕಳಿಗೆ ಸಮನಾಗಿ ತನ್ನ ಆಸ್ತಿಗಳು ಹೋಗಬೇಕೆಂದು ಸಾಕ್ಷ್ಯ ನುಡಿಯುತ್ತಾರೆ ಎಂದು ತಿಳಿದು ನಾನು ಅವರ ಪರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನನ್ನ ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಬಲ್ಲಳು ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನನ್ನ ತಾಯಿಯ 4 ಜನ ಮಕ್ಕಳಿಗೆ ಸಮನಾದ ಹಿಸ್ಸೆ ಎಂದರೆ ಸಾಕ್ಷಿ ತಂದೆಯ ಆಸ್ತಿಗಳಲ್ಲಿ ಇದೆ ತಾಯಿಯ ಆಸ್ತಿಯನ್ನು ಅವಳು ಯಾರಿಗೆ ಮಾಡುತ್ತಾರೆ ಅವರಿಗೆ ಎನ್ನುತ್ತಾರೆ. ನನ್ನ ಪರವಾಗಿ ಮಾತ್ರ ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.